# ಮನೆಯೊಳಗಿನ ‘ಮಿನಿ ಮರ’

ಮನೆಯೊಳಗೆ ಹಸುರು ತುಂಬಿದಂತಿರಬೇಕು, ಜೊತೆಗೆ ನೋಟವೂ ಸೊಗಸಾಗಿರಬೇಕು ಎನ್ನುವ ಸಸ್ಯಪ್ರೇಮಿಗಳಿಗೆ ‘ಸ್ಟೇಟ್‌ಮೆಂಟ್ ಪ್ಲಾಂಟ್’ ಅತ್ಯುತ್ತಮ ಆಯ್ಕೆ. ಇಂಥ ಗಿಡಗಳು ಒಳಾಂಗಣ ವಿನ್ಯಾಸದ ಈಚಿನ ಟ್ರೆಂಡ್ ಕೂಡ ಆಗಿವೆ.

■ ಸೀಮಾ ಹೆಗಡೆ

ಸಾಹಿತಿಯ ಮನೆ ತುಂಬ ಪುಸ್ತಕಗಳು, ಚಿತ್ರಕಾರನ ಮನೆ ತುಂಬ ಕಲಾಕೃತಿಗಳು, ಪ್ರವಾಸಿಗನ ಮನೆ ತುಂಬ ತಿರುಗಾಟದ ಸ್ಮರಣಿಕೆಯ ಸಂಗ್ರಹಗಳು; ನಮ್ಮ ಮನೆ ನಮ್ಮ ಮನಸ್ಸಿನ ಪ್ರತಿಫಲನ. ನಾವ್ಯಾರು, ನಮ್ಮ ಅಭಿರುಚಿಯೇನು, ನಮ್ಮ ಹವ್ಯಾಸಗಳೇನು ಎಂಬುದರ ಕಥೆಯನ್ನು ನಮ್ಮ ಮನೆ ಬಿಚ್ಚಿಡುತ್ತದೆ. ಹಾಗೆಯೇ, ಮನೆಯಲ್ಲಿನ ಗಿಡಗಳು, ಮನೆಯ ಸದಸ್ಯರ ಹಸುರು ಪ್ರೀತಿಯನ್ನು ಸಾರಿ ಹೇಳುತ್ತದೆ.

ಒಳಾಂಗಣ ಸಸ್ಯಗಳ ಬಳಕೆಯಲ್ಲಿ ಮೇಲ್ನೋಟಕ್ಕೆ ಎರಡು ತರಹದ ಹವ್ಯಾಸಿ ವರ್ಗಗಳನ್ನು ಗುರುತಿಸಬಹುದು. ವೈವಿಧ್ಯ ಬಯಸುವ, ಮನೆಯ ಪ್ರತಿ ಕೋಣೆ, ಪ್ರತಿ ಮೂಲೆ, ಶೆಲ್ಫ್‌ನಲ್ಲಿ ಗಿಡಗಳನ್ನು ಬೆಳೆಸಿ ಹಸುರು ಕಾಡೊಂದನ್ನು ನಿರ್ಮಿಸುವ ‘ಮ್ಯಾಕ್ಸಿಮಲಿಸ್ಟ್’ಗಳ ವರ್ಗ ಒಂದಾದರೆ; ಸರಳತೆ ಬಯಸುವ, ಒಂದೆರಡು ಗಿಡದೊಂದಿಗೆ ಅನ್ಯೋನ್ಯತೆಯಿಂದ ದಿನವೂ ಸಂವಾದಿಸುವ ‘ಮಿನಿಮಲಿಸ್ಟ್’ಗಳ ವರ್ಗ ಇನ್ನೊಂದು. ಅನವಶ್ಯಕವಾಗಿ ನರ್ಸರಿಯಲ್ಲಿ ಕಂಡ ಗಿಡವನ್ನೆಲ್ಲಾ ತಂದು ಗುಡ್ಡೆ ಹಾಕಿ, ಗೊಂದಲದ ಗೂಡಾಗಿ, ಅವುಗಳ ಕಾಳಜಿಯಲ್ಲಿ ಹೈರಾಣಾಗುವ ಬದಲು ಎರಡೇ ಗಿಡಗಳನ್ನು ಪ್ರೀತಿಯಿಂದ ನೋಡಿಕೊಳ್ಳುವುದು ಒಳ್ಳೆಯದೆಂಬುದು ಮಿನಿಮಲಿಸ್ಟ್‌ಗಳ ವಾದ.

## ಸ್ಟೇಟ್‌ಮೆಂಟ್ ಗಿಡಗಳ ಹೊಸ ಅಲೆ

ಕಣ್ಣು, ಮನಸ್ಸು ಮೆಚ್ಚುವಂತಹ ಒಂದೇ ಸಸ್ಯವನ್ನು ಸಲಹುವ ಮಿನಿಮಲಿಸ್ಟ್‌ಗಳ ಮನಸ್ಥಿತಿ ಇಂದು ‘ಸ್ಟೇಟ್‌ಮೆಂಟ್ ಪ್ಲಾಂಟ್’ಗಳ ಹೊಸ ಅಲೆಯನ್ನು ಹುಟ್ಟುಹಾಕಿದೆ.

‘ವಾಹ್!’ ಎನಿಸುವ, ತನ್ನಂತೆ ಮತ್ತೊಬ್ಬರಿಲ್ಲ ಎಂಬಂತೆ ಸೆಳೆಯುವ ‘ಸ್ಟೇಟ್‌ಮೆಂಟ್ ಪ್ಲಾಂಟ್’ಗಳಿಗೆ ಇಂದು ಒಳಾಂಗಣದಲ್ಲಿ ‘ವಿಐಪಿ’ಗಳ ವಿಶೇಷ ಸ್ಥಾನಮಾನ. ಮನೆಯೊಳಗೆ ಹಸುರಿರಬೇಕು, ನಿರ್ವಹಣೆ ಸುಲಭವಿರಬೇಕು, ನೋಟ ಅದ್ದೂರಿಯಿರಬೇಕು ಎನ್ನುವವರಿಗೆ ಇವು ಅತ್ಯುತ್ತಮ ಆಯ್ಕೆ.

ಸರಳತೆ, ಎದ್ದು ಕಾಣುವ ಬೃಹತ್ ಗಾತ್ರ ಇವುಗಳ ವಿಶೇಷ. ಎಲೆ–ಚಿಗುರುಗಳ ಸೂಕ್ಷ್ಮಗಳನ್ನು ಗಮನಿಸಿ ಮುಟ್ಟಿ ಅನುಭವಿಸಲು ಅನುವು ಮಾಡಿಕೊಡುವ ಈ ಸಸ್ಯಗಳು ಚಿತ್ತಾಕರ್ಷಕ. ಬಿಳಿ ಅಥವಾ ಯಾವುದೇ ಏಕವರ್ಣದ ಗೋಡೆಯ ಮುಂದೆ ಎದ್ದುಕಾಣುವಂತೆ ದೊಡ್ಡ, ಆಲಂಕಾರಿಕ ಸಿರಾಮಿಕ್ ಕುಂಡ ಅಥವಾ ತಾಮ್ರದ/ಹಿತ್ತಾಳೆಯ ಕಂಟೇನರ್‌ನಲ್ಲಿ ಇರಿಸಿದ ಸ್ಟೇಟ್‌ಮೆಂಟ್ ಪ್ಲಾಂಟ್ ಒಳಾಂಗಣ ವಿನ್ಯಾಸದ ಇತ್ತೀಚಿನ ಟ್ರೆಂಡ್.

## ಸ್ಟೇಟ್‌ಮೆಂಟ್ ಆಗಬಲ್ಲ ಸಸ್ಯಗಳು

ಒಳಾಂಗಣ ಸಸ್ಯಗಳದ್ದು ದೊಡ್ಡ ಬಳಗ. ಆದರೆ ಎಲ್ಲವೂ ಸ್ಟೇಟ್‌ಮೆಂಟ್ ಆಗಲಾರವು. ಚಿಕ್ಕ ಗಾತ್ರದ ಸಕ್ಯುಲೆಂಟ್, ಮನಿ ಪ್ಲಾಂಟ್, ಫೀಲೋಗಳು ಈ ಆಟದಿಂದ ಹೊರಗೆ. ಕನಿಷ್ಠ ಆರಡಿ ಎತ್ತರದ, ಅನನ್ಯ ವಿನ್ಯಾಸದ, ನಿಧಾನ ಬೆಳವಣಿಗೆಯ, ದೂರದಿಂದಲೇ ಆಲಂಕಾರಿಕವಾಗಿ ಪ್ರದರ್ಶಿತವಾಗುವ ಸಸ್ಯಗಳು ಹೆಚ್ಚು ಸೂಕ್ತ. ಸ್ಟೇಟ್‌ಮೆಂಟ್ ಆಗಬಲ್ಲ

